**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**
**ಸಾಕ್ಷಿಗೆ ಇಂದು ದಿನಾಂಕ : 21.02.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ 1 ರಿಂದ 6 ಪರವಾಗಿ ಶ್ರೀ. ಎಂ ಬಿ ಎಚ್ . ವಕೀಲರಿಂದ**

ನನ್ನ ಸ್ವವಂತ ಊರು ಕಡರಕೊಪ್ಪ ಗ್ರಾವಗು ಆಗಿರುವುದಿಲ್ಲ. ಕೆ ಡಿ ಬದ್ನಿ ಗ್ರಾಮ ಆಗಿರ್ಉವುದು. ಈ ಗ್ರಾಮದಲ್ಲಿ ನನ್ನ ಹೆಸರಿನಲ್ಲಿ ಮನೆ ಮಾತ್ರ ಇರುವುದು ಜಮೀನುಗಳು ಇರುವುದಿಲ್ಲ. ಈ ಗ್ರಾಮದಲ್ಲಿ ಮನೆ ನನ್ನ ಸಂಬಂಧಿಗಳು ಆಗಿದ್ದು ಅದು ಈಗ ಬಿದ್ದು 40 ವರ್ಷಗಳು ಆಗಿರುವುದು ಎಂದರೆ ಸರಿಯಲ್ಲ ನಾನು ಅದೇ ಗ್ರಾಮದ ಮನೆಯಲ್ಲಿ ವಾಸ ಇರುವುದಾಗಿ ಸಾಕ್ಷಿ ಉತ್ತರಿಸುವರು. ಈ ಗ್ರಾಮದಲ್ಲಿ ನಾನು ವಾಸವಾಗಿದ್ದ ಬಗ್ಗೆ ಯಾವುದೇ ಗುರುತಿನ ಚೀಟಿಗಳು ಇರುವುದಿಲ್ಲ ಎಂದರೆ ಸರಿಯಲ್ಲ ನನ್ನ ಆಧಾರ ಕಾರ್ಡ , ಚುನಾವಣಾ ಗುರುತಿನ ಚೀಟಿ ಹಾಗಗೂ ಆರ್ ಸಿ ದಾಖಲೆ ಈ ಗ್ರಾಮದ ವಿಳಾಸದಲ್ಲಿ ಇರುದಾಗಿ ಎಂದು ಅ ದ್ಜಾಖಲೆಗಳನ್ನು ಈ ನ್ಯಾಯಾಲಯದಲ್ಲಿ ತೋರಿಸುವರು. ವಾದಿಯರು ನನ್ನ ಸಂಬಂಧಿಕರು ಆಗಿರುವರು. ನಾನು ಪಿ ಯು ಸಿ ವರೆಗೆ ಶಾಲೆ ಕಲಿತಿರುವೆನು. ನನ್ನ ಜನ್ಮ ದಿನಾಂಕ 1983 ಇರುವುದು. ವಾದಿ 4 ರವರ ವಿವಾಹ ಪ್ರತಿವಾದಿ 1 ರವರ ಜೊತೆ ನಾನು ಜನ್ಮ ತಾಳುವ ಪೂರ್ವದಲ್ಲಿ ಆಗಿರುವುದು. ವಾದಿ 4 ರವರು ಯಾರ ಜೊತ ವಿವಾಹ ಮಾಡಿಕೊಂಡಿರುವರು ಎಂಬುದುರ ಬಗ್ಗೆ ನನ್ನ ಸ್ವಂತಕ್ಕೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ 4 ರವರು ಪ್ರತಿವಾದಿ 1 ರವವರ ಹೆಂಡತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ 2 ರವರ ಗಂಡ ಮೃತ ಮಳಿಯಪ್ಪ ಪ್ರತಿವಾದಿ 1 ಮತ್ತು 4 ರವರ ಮಗನಾಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ 1 ರವರು ಪ್ರತಿವಾದಿ 1 ಮತ್ತು ವಾದಿ 4 ರವರ ಮಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ 1 ರಿಂದ 4 ರವರು ಯಾವುದೇ ಕಾಲಕ್ಕೂ ಬುದ್ನಿ ಕೆ ಡಿ ಗ್ರಾಮದಲ್ಲಿ ವಾಸ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ 4 ರವರು ಲೋಕಾಪೂರ ಗ್ರಾಮದಲ್ಲಿ ವಾಸ ಆಗಿರುವಳು ಎಂದರೆ ಸರಿ . ಇವಳು ಲೋಕಾಪೂರ ಗ್ರಾಮದಿಂದ ಬುದ್ನಿ ಕೆ ಡಿ ಗ್ರಾಮಕ್ಕೆ ಹೋಗಿ ಬಂದು ಮಾಡುತ್ತಿರುವಳು. ಯಾವುದೇ ಕಾಲಕ್ಕೂ ಪ್ರತಿವವಾದಿ 1 ಲೋಕಾಪೂರ ಗ್ರಾಮದಲ್ಲಿ ವಾಸ್ತವ್ಯ ಹೂಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ 4 ರವರ ಆಧಾರ ಕಾರ್ಡ ಕೇವಲ ಲೋಕಾಪೂರ ಗ್ರಾಮದ ವಿಳಾಸದಲ್ಲಿ ಮಾತ್ರ ಇರುವುದು ಎಂದರೆ ಸರಿಯಲ್ಲ. ಬುದ್ನಿ ಕೆ ಡಿ ಗ್ರಾಮದಲ್ಲಿ ಇರುವುದಾಗಿ ಸಾಕ್ಷಿ ಉತ್ತರಿಸುವರು. ವಾದಿ 1 ರವರು ಕಡರಕೊಪ್ಪ ಗ್ರಾಮದಲ್ಲಿ ವಾಸ ಆಗಿರುವಳು ಎಂದರೆ ಸರಿಯಲ್ಲ ಅವಳು ಸಹ ಬುದ್ನಿ ಕೆ ಡಿ ಗ್ರಾಮದಲ್ಲಿ ವಾಸವಾಗಿರುವಳು. ಅವಳ ಆಧಾರ ಕಾರ್ಡ ಕಡರಕೊಪ್ಪ ಗ್ರಾಮದ್ದು ಇರುವುದು ಎಂದರೆ ಸರಿ. ಹೊಳೆಯಪಪ್ಪ ತಂದೆ ಹೆಸರು ಸಿದ್ದಪ್ಪ ಲೋಕಾಪೂರ ಎಂದರೆ ಸರಿಯಲ್ಲ . ಆತನ ತಂದೆ ಹೆಸರು ಗಿರಿಯಪ್ಪ ಇರುವುದು ಎಂದು ಸಾಕ್ಷಿ ಉತ್ತರಿಸುವರು. ಸಿದ್ದಪ್ಪ ಲೋಕಾಪೂರ ಬಾಗಲಕೋಟೆಯಲ್ಲಿ ವಾಸ ಇರುವರು ಎಂದರ ಇವರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಉಸ್ಸರಿಸುವರು. ಇವರ ಆಧಾರ ಗುರುತಿನ ಚೀಟಿ ವಿಳಾಸ ಬಾಗಲಕೋಟೆ

ಅಂತಾ ಇರುವುದು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ಉತ್ತರಿಸುವರು. ವಾದಿ 2 ರವರ ವಿವಾಹ ಸಿದ್ದಪ್ಪ ಲೋಕಾಪೂರ ಎಂಬುವನ ಮಗನ ಜೊತೆ ಆಗಿರುವುದು ಎಂದರೆ ಸರಿಯಲ್ಲ. ಈ ರೀತಿಯಾಗಿ ವಾದಿ 2 ರವರು ತನ್ನ ಆಧಾರ ಗುರುತಿನ ಚೀಟಿಯನ್ನು ಮಾಡಿರುವಳು ಎಂದರೆ ಸರಿಯಲ್ಲ. ಮೃತ ಪ್ರತಿವಾದಿ 1 ಮತ್ತು 6 ರ ನಮ್ಮ ಸಹೋದರರ ಮಧ್ಯೆ ಪಾಲು ವಾಟ್ನಿ ಆದ ದಾಖಲಾತಿಯನ್ನು ನಾನು ನೋಡಿರುವೆನು. ಈ ಪಾಲು ವಾಟ್ನಿ ಯಾವ ದಿನಾಂಕದಂದು ಮಾಡಿಕೊಂಡಿರುವ ಎಂಬುದರ ಬಗ್ಗೆ ನನಗೆ ನೆನಪಿರುವುದಿಲ್ಲ. ಎಷ್ಟು ವರ್ಷಗಳ ಹಿಂದೆ ಈ ಪಾಲು ವಾಟ್ನಿ ಮಾಡಿಕೊಡಿರುವರು ಎಂಬುದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿ 4 ಪ್ರತಿವಾದಿ 1 ರವರ ವೈವಾಹಿಕ ಜೀವನದಿಂದ ವಾದಿ 1 ಮತ್ತು ಮೃತ ಹೊಳೆಯಪ್ಪ ಜನ್ಮ ತಾಳಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರಿಗೂ ಮತ್ತು ಪ್ರತಿವಾದಿಯರಿಗೂ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮೃತ ಪ್ರತಿವಾದಿ 1 ಮತ್ತು ವಾದಿ 4 ರವರ ಮುಧ್ಯ ವಿವಾಹ ಆದ ಬಗ್ಗೆ ನನಗೆ ಸ್ವಂತಕ್ಕೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪಾಲು ವಾಟ್ನಿಯ ಬಗ್ಗೆ ಪೋಡಿ ಮಾಡಿಕೊಂಡ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಈ ದಾವೆಗೆ ಸಂಬಂಧಪಟ್ಟಂತೆ ನಾನು ಮ್ರುತ ಪ್ರತಿವಾದಿ 1 ರವರ ಹೆಸರಿನಲ್ಲಿ ಇದ್ದ ಪಹಣಿ ಪತ್ರಿಕೆಗಳನ್ನು ನೋಡುವ ಪ್ರಸಂಗ ಬಂದಿರುವುದು. ಗಿರಿಯಪ್ಪನ ಸಹೋರನಾದ ಬೀಮಪ್ಪನ ಮಧ್ಯ ಇದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಆಗಿತ್ತು ಎಂದರೆ ಸರಿ. ಅದೇ ರೀತಿ ಭೀಮಪ್ಪನ ಹೆಂಡತಿ ಆಗದೇ ಇದ್ದರೂ ಸಹ ಅವಳ ಪರವಾಗಿ ನಾನು ಈ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ. ಆ ದಾವೆ ಅವಳು ಮೊದಲನೆ ಹೆಂಡತಿ ಆಗಿರುವುದಿಲ್ಲ ಎಂದು ಹೇಳಿ ನ್ಯಾಯಾಲಯದವರು ಅದನ್ನು ವಜಾಗೊಳಿಸಿರುವರು ಎಂದರೆ ಸರಿ. ಈ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳ ಬಗ್ಗೆ ಹಾಗೂ ಪೋಡಿ ಆದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರು ಯಾವುದೇ ಕಾಲಕ್ಕೂ ಕಬ್ಜಾ ವಹಿವಾಟು ಹೋದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಈ ದಾವೆಯಲ್ಲಿ ಯಾವ ದಾಖಲೆಗಳನ್ನು ಹಾಜರುಪಡಿಸಿರುವರು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಗಳು ಪ್ರತಿವಾದಿ 3 ರವರ ಹೆಸರಿನಲ್ಲಿ ದಾಖಲು ಇರುವವು ಎಂದರೆ ಅವುಗಳನ್ನು ಅವರು ಖೊಟ್ಟಿಯಾಗಿ ಮಾಡಿಕೊಂಡಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ದಾವಾ ಆಸ್ತಿ ಸರ್ವೆ ನಂ. 44/1 ನ್ನು ಪ್ರತಿವಾದಿ 1 ರವರು ಪ್ರತಿವಾದಿ 2 ರವರಿಗೆ ನೀಡಿದ್ದು ಅವಳು ಈ ಆಸ್ತಿಯನ್ನು ತನ್ನ ಮಗಳಾದ ಪ್ರತಿವಾದಿ 3 ರವರಿಗೆ ಭಕ್ಷಿಸ ಪತ್ರ ಮಾಡಿಕೊಟ್ಟಿರುವಳು ಎಂದರೆ ಸರಿಯಲ್ಲ. ದಾವಾ ಆಸ್ತಿ 44/4 ಈ ಜಮೀನನ್ನು ಪ್ರತಿವಾದಿ 1 ರವರು ದಿಃ 05.07.2021 ರಂದು ಪ್ರತಿವಾದಿ 3 ರವರಿಗೆ ನೊಂದಾಯಿತ ಭಕ್ಷಿಸ ಪತ್ರ ಮೂಲಕ ನೀಡಿರುವರು ಎಂದರೆ ಸರಿಯಲ್ಲ. ಈ ಭಕ್ಷಿಸ ಪತ್ರದ ಆಧಾರದ ಮೇಲೆ ದಾವಾ ಆಸ್ತಿಗಳು ಪ್ರತಿವಾದಿ 3 ರವರ ಹೆಸರಿನಲ್ಲಿ ಪಹಣಿ ಪತ್ರಿಕೆಗಳಲ್ಲಿ ಕಬ್ಜೆದಾರರು ಮತ್ತು ಮಾಲೀಕರು ಕಾಲಂನಲ್ಲಿ ದಾಖಲು ಆಗಿವೆ ಎಂದರೆ ಸರಿಯಲ್ಲ. ವಾದಿಯರು ಮೃತ ಪ್ರತಿವಾದಿ 1 ರವರ

ಜೊತೆ ಸಾಮೂಹಿಕವಾಗಿ ವಾಸವಾಗಿದ್ದ ಬಗ್ಗೆ ಯಾವುದೇ ಸರ್ಕಾರಿ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಶಾಲಾ ದಾಖಲೆಗಳು, ಆಧಾರ ಕಾರ್ಡಗಳು ಇರುವವು. ಈ ಸಂಗತಿ ನಿಜ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರು ನನಗೆ ಸಂಬಂಧಿ ಆಗಿರುವುದರಿಂದ ಆ ಕಾರಣಕ್ಕಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರ ವಿವಾಹ ಸುಮಾರು 45 ವರ್ಷಗಳ ಹಿಂದೆ ತಮ್ಮ ಧರ್ಮ ಸಂಪ್ರದಾಯದ ಪ್ರಕಾರ ಗೋಕಾಕ ತಾಲೂಕಿನ ಕರಡಿಗುಡ್ಡ ಗ್ರಾಮದಲ್ಲಿ ಶ್ರೀ ಹಣಮಂತ ದೇವರಸ್ಥಾನದಲ್ಲಿ ಆಗಿರುವುದು ಎಂದರೆ ಸರಿಯಲ್ಲ. ಇವರ ವಿವಾಹವನ್ನು ಗುರುಲಿಂಗಯ್ಯ ಸ್ವಾಮಿ ಇವರ ಸಮ್ಮುಖದಲ್ಲಿ ಆ ವಿವಾಹದ ವಿಧಿ ವಿಧಾನಗಳನ್ನು ನೇರವೇರಿಸುವರು ಎಂದರೆ ಸರಿಯಲ್ಲ. ಇವರ ವಿವಾಹ ಅವರ ಧರ್ಮ ಸಂಪ್ರಾದಾಯದ ಪ್ರಕಾರ ಕಂಬಳಿ ಹಾಯಿಸುವುದು , ಹಾಸಕ್ಕಿ ಹೊಯ್ಯುವುದು, ಸುರಗಿ ಸುತ್ತುವುದು , ವಧು ವರರಿಗೆ ಅರಶಿನ ಹಚ್ಚವುದು , ಸುರಗಿ ನೀರು ಹಣಿಸುದು , ಹೊಸ ಬಟ್ಟೆ ತೋಡೆಸುವುದು, ಬಾಸಿಂಗ ಕಟ್ಟುವುದು, ವದು ವರರನ್ನು ಖುರ್ಚಿ ಮೇಲೆ ಕೂಡಿಸಿ ಗಂಡ ಹೆಂಡರ ದೋತರ ಪಂಚೆಗೆ ಮತ್ತು ಸೀರೆ ಸೆರಗಿಗೆ ಗಂಟು ಕಟ್ಟಿದ್ದು ಸ್ವಾಮಿಗಳು ಶಾಸ್ತ್ರೋಕ್ತವಾಗಿ ಮಂತ್ರ ಪಠಣ ಮಾಡಿ 1 ನೇ ಪ್ರತಿವಾದಿಯ ಕೈಯಲ್ಲಿ ತಮ್ಮ ಹೆಂಡತಿಯಾದ 2 ನೇ ಪ್ರತಿವಾದಿ ಕೊರಳಿಗೆ ತಾಳಿ ಕಟ್ಟಲು ಕೊಟ್ಟಿದ್ದು ಆ ಪ್ರಕಾರ ತಾಳಿ ಕಟ್ಟಿರುತ್ತಾರೆ ಎಲ್ಲ ಜನರು ಅಕೆತೆ ಹಾಕಿ ಆಶಿರ್ವದಿಸಿ ಬೋಜನ ಮಾಡಿಕೊಡಿಕೊಂಡ ಹೋಗಿರುತ್ತಾ ರೆ ಮದುವೆ ಆದ ನಂತರ ಪ್ರತಿವಾದಿ 1 ಮತ್ತು 2 ಇವರು ದೇವರಿಗೆ ನಮಸ್ಕರಿಸಿ ಎಲ್ಲ ಗುರುಹಿರಿಯರ ಆಶೀರ್ವಾದ ಪಡೆದುಕೊಂಡಿರಿದ್ದು ಇರುತ್ತದೆ. ಹಾಗೂ ಇಬ್ಬರ ವೈವಾಹಿಕ ಜೀವನದಿಂದ ಸುಮಾರು 40 ವರ್ಷಗಳ ಹಿಂದೆ ಪ್ರತಿವಾದಿ 3 ರವರು ಜನಿಸಿರುವಳು ಎಂದರೆ ಸರಿಯಲ್ಲ. ನಾನು ಜನ್ಮ ತಶಾಳುವ ಪುವಾರ್ವದಲ್ಲಿ ಇವರ ವಿವಾಹ ಆಗಿರುವುದರಿಂದ ನನಗೆ ಇವರ ವಿವಾಹದ ಬಗೆಗ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ ಇವರ ವಿವಾರ ಆಗಿರುವುದಿಲ್ಲ ಎಂದು ಸಾಕ್ಷಿ ಉತ್ತರಿಸುವರು. ನಾನು ಹಣವನ್ನು ಪಡೆದುಕೊಡಯಿ ಸಾಕ್ಷಿ ನುಡಿಯುತ್ತೇನೆಂ ದರೆ ಸರಿಯಲ್ಲ. ನನಗೆ ಈ ದಾವೆ ಬಗ್ಗೆ ಯಾವುದೆಪೀ ಮಾಹಿತಿ ಇರದೇ ಇದ್ದರೂ ಸಹ ವಾದಿಯರ ಪರವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ,**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

Sd/-

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ